## ವಾರ್ತಾ ವಿಶ್ಲೇಷಣೆ

# ಪರಿಶ್ರಮ- ಪ್ರಾಮಾಣಿಕತೆಗಳ ಪ್ರತೀಕ

**ಕ್ರಿಯಾಸಿದ್ಧಿಃ ಸತ್ವೇ ಭವತಿ ಮಹತಾಂ ನೋಪಕರಣೇ** – ಯಾವುದೇ ಒಂದು ಕೆಲಸವು ವ್ಯಕ್ತಿಯೊಬ್ಬನ ಅಂತಸ್ಸತ್ವದ ಮೂಲಕವಾಗಿಯೇ ಸಿದ್ಧಿಯನ್ನು ಕೊಡುತ್ತದೆಯೇ ಹೊರತು, ಆ ಕೆಲಸಕ್ಕೆ ಉಪಯೋಗಿಸಲಾದ ಉಪಕರಣಗಳ ಮೇಲೆ ಅದು ಅವಲಂಬಿಸಿಲ್ಲ.

ಅಮೆರಿಕದ ನೂತನ ಅಧ್ಯಕ್ಷರಾದ ಬ್ಯಾರಕ್ ಒಬಾಮಾ ಅವರಿಗೆ ಮೇಲಿನ ಉಕ್ತಿ ಸರಿಯಾಗಿ ಹೊಂದುತ್ತದೆ. ಅವರು ಅಮೆರಿಕದ ಮೊದಲ ಆಫ್ರಿಕನ್ ಮೂಲದ ಅಧ್ಯಕ್ಷರು. ಹಾಗೆಯೇ ಜಾನ್ ಎಫ್. ಕೆನಡಿ ಅವರನ್ನು ಬಿಟ್ಟರೆ, ಅತ್ಯಂತ ಕಿರಿಯ ವಯಸ್ಸಿನವರು ಕೂಡ. ಅವರು ಜಗತ್ತಿನ ಅತ್ಯಂತ ಶಕ್ತಿಶಾಲಿ ಪದವಿಗೆ ಏರಿದ ಕತೆ ರೋಚಕನೀಯವಾಗಿದೆ ಮತ್ತು ನಮ್ಮ ಯುವಕರಿಗೆ ಆದರ್ಶ ಪ್ರಾಯವಾಗಿದೆ.

ಒಬಾಮಾ ಅವರ ತಂದೆ ಕೆನ್ಯಾ ದೇಶದಿಂದ ಬಂದ ಕಪ್ಪು ಜನಾಂಗದವರು. ತಾಯಿ, ಶ್ವೇತವರ್ಣೀಯರು. ಇಬ್ಬರೂ ವಿದ್ಯಾರ್ಥಿಗಳಾಗಿದ್ದಾಗಲೇ ಮದುವೆಯಾದರು. ನಂತರ ವಿಚ್ಛೇದನಗೊಂಡ ಆ ದಂಪತಿಗಳಿಗೆ ಹುಟ್ಟಿದ ಮಗನೇ ಒಬಾಮಾ. ಆಶ್ಚರ್ಯವೆಂದರೆ, ಒಬಾಮಾ ತನ್ನ ತಂದೆಯನ್ನು ನೋಡಿದ್ದು ಕೇವಲ ಒಂದು ಸಲ ಮಾತ್ರ.

ತಾಯಿಯ ಜೊತೆಗೆ ಬೆಳೆದ ಒಬಾಮಾ ಹವಾಯಿ ದ್ವೀಪಗಳಲ್ಲಿ, ನಂತರ ಇಂಡೋನೇಷಿಯಾ ದೇಶದಲ್ಲಿ ತಮ್ಮ ಬಾಲ್ಯದ ದಿನಗಳನ್ನು ಕಳೆದರು. ಆ ಹೊತ್ತಿಗೆ ತಾಯಿ ಮರುಮದುವೆಯಾಗಿದ್ದರು. ನಂತರ ಒಬಾಮಾ ಬೆಳೆದಿದ್ದು, ತನ್ನ ತಾಯಿಯ ತಂದೆ–ತಾಯಿಗಳ ಆರೈಕೆಯಲ್ಲಿ. ಹೀಗೆ ಚಿಕ್ಕಂದಿನಲ್ಲಿಯೇ ಕೌಟುಂಬಿಕ ವಿಭಜನೆಯ ಪರಿಣಾಮಗಳನ್ನು ಒಬಾಮಾ ಎದುರಿಸಿದರು.

ಅವರ ವಿದ್ಯಾರ್ಥಿ ಜೀವನ ಕೂಡ ಸುಖಕರವಾಗಿರಲಿಲ್ಲ. ಯೌವನದಲ್ಲಿ ಸಹಜವಾಗಿ ಕಾಣಬರುವ ನೈತಿಕ ಸಂದಿಗ್ಧತೆ ಅವರನ್ನು ಕಾಡಿತ್ತು. ಮಾದಕದ್ರವ್ಯಗಳ ವ್ಯಸನಿಯಾಗಿದ್ದರೆಂದು ಅವರೇ ಒಪ್ಪಿಕೊಂಡಿದ್ದಾರೆ. "ಅದು ನನ್ನ ಜೀವನದ ಅತ್ಯಂತ ದೊಡ್ಡ ನೈತಿಕ ವಿಫಲತೆ" ಎಂದು ಅವರು ಹೇಳುತ್ತಾರೆ.

ಒಬಾಮಾ ಅವರ ತಂದೆ ಮುಸ್ಲಿಮರಾಗಿದ್ದರೂ, ತಾಯಿ ಕ್ರೈಸ್ತಧರ್ಮೀಯರು. ಒಬಾಮಾ ಹೀಗೆ ಮಿಶ್ರ ಜನಾಂಗಗಳ ಮತ್ತು ವಿವಿಧ ಧರ್ಮಗಳ ಹಾಗೂ ಸಂಸ್ಕೃತಿಗಳ ಪರಿಸರದಲ್ಲಿ ಬೆಳೆದರು. "ಇದು ನನಗೆ ವಿವಿಧ ಸಂಸ್ಕೃತಿಗಳನ್ನು ಪರಸ್ಪರ ಗೌರವದಿಂದ ಕಾಣುವ ವಾತಾವರಣವನ್ನು ಅನುಭವಿಸುವ ಅವಕಾಶವನ್ನು ದೊರಕಿಸಿಕೊಟ್ಟಿತು. ಇದು ಪ್ರಪಂಚವನ್ನು ಕಾಣುವ ನನ್ನ ದೃಷ್ಟಿಯ ಅವಿಭಾಜ್ಯ ಅಂಗವಾಗಿದೆ ಮತ್ತು ನನಗೆ ಪ್ರೀತಿಪಾತ್ರವಾದ ಮೌಲ್ಯಗಳ ಆಧಾರವಾಗಿದೆ" ಎಂದು ಅವರು ಹೇಳುತ್ತಾರೆ.

ಒಬಾಮಾ ಮುಖ್ಯವಾಗಿ ಸಾಮಾಜಿಕ ಸೇವಾಕಾರ್ಯಕರ್ತರಾಗಿ ಮತ್ತು ಮಾನವ ಹಕ್ಕುಗಳ ವಕೀಲರಾಗಿ ತಮ್ಮ ವೃತ್ತಿ ಜೀವನವನ್ನು ನಡೆಸಿದರು. ಅನೇಕ ಜನಹಿತ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅದಲ್ಲದೆ ಅತ್ಯುತ್ತಮ ಭಾಷಣಕಾರರಾಗಿ ಜನಪ್ರಿಯತೆಯನ್ನು ಪಡೆದರು. "ಸಾಂಪ್ರದಾಯಿಕ ಅಮೆರಿಕ, ಉದಾರವಾದಿ ಅಮೆರಿಕ ಎಂಬ ಎರಡು ಅಮೆರಿಕಗಳಿಲ್ಲ, ಇರುವುದು ಒಂದೇ ಅಖಂಡವಾದ ದೇಶ" – ಇದು ಅವರ ಒಂದು ಪ್ರಸಿದ್ಧವಾದ ಉಕ್ತಿ.

ಹಿಂದಿನ ಸರ್ಕಾರವು ಇರಾಕ್ ದೇಶದ ಮೇಲೆ ಆಕ್ರಮಣ ಮಾಡಿದ್ದನ್ನು ಕಟುವಾಗಿ ಟೀಕಿಸುತ್ತಿದ್ದ ಒಬಾಮಾ, ಅದರ ಭೀಕರ ಪರಿಣಾಮಗಳ ವಿರುದ್ಧ ಜನಾಭಿಪ್ರಾಯವನ್ನು ಯಶಸ್ವಿಯಾಗಿ ಒಟ್ಟುಗೂಡಿಸಿದರು. ಇದು ಅವರನ್ನು ಅಮೆರಿಕದ ಭವಿಷ್ಯದ ತಾರೆಯನ್ನಾಗಿ ರೂಪಿಸಿತು.

ಒಬಾಮಾ ಅವರ ಆರ್ಥಿಕ ನೀತಿ, ಬಡಜನರ ಮತ್ತು ಮಧ್ಯಮ ವರ್ಗದವರ ಪರವಾಗಿರುವುದನ್ನು ನಾವು ಗಮನಿಸಬಹುದು. ಅದೇ ರೀತಿ, ಭಯೋತ್ಪಾದನೆಗೆ ಸಹಾಯ ಮಾಡುತ್ತಿರುವ ಪಾಕಿಸ್ತಾನದಂತಹ ದೇಶಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ನೀತಿಯನ್ನೂ ಅವರು ತಳೆದಿದ್ದಾರೆ.

ಕರಿಯ ಜನಾಂಗವರನ್ನು ನಿರ್ದಯವಾಗಿ ಕಾಣುವಂತಹ ಪರಿಸ್ಥಿತಿ ಇತ್ತೀಚಿನವರೆಗೆ ಅಮರಿಕದಲ್ಲಿ ಇತ್ತು, ಈಗಲೂ ಅಲ್ಲಲ್ಲಿ ಕಾಣಬರುತ್ತಿದೆ. ಜನಾಂಗೀಯ ಮನಸ್ತಾಪ, ಅಸೂಯೆ, ಸಂಶಯಗಳು ಅಮೆರಿಕ ದೇಶದ ಸುಸ್ಥಿರತೆಯನ್ನು ಹಾಳು ಮಾಡುತ್ತಿರುವ ಕೆಲವು ಅಂಶಗಳು. ಹೀಗಾಗಿ ಎರಡೂ ಜನಾಂಗದವರ ಹೃದಯವನ್ನು ಗೆದ್ದಿರುವ ಬ್ಯಾರಕ್ ಒಬಾಮಾ ಅಮೆರಿಕದ ಘಾಸಿಗೊಂಡ ಮನಸ್ಸಿಗೆ ಶಾಂತಿ, ಸಾಮರಸ್ಯಗಳ ಸಿಂಚನವನ್ನು ನೀಡುವರೆಂದು ಆಶಿಸಲಾಗಿದೆ. ಹಾಗೆಯೇ ಅಂತರರಾಷ್ಟ್ರೀಯ ವಿದ್ಯಮಾನಗಳ ಬಗ್ಗೆ ಅವರು ತಳೆದಿರುವ ವಾಸ್ತವಿಕ ಹಾಗೂ ಕಠಿಣ ನಿಲುವನ್ನು ವಿಶ್ವದ ಅನೇಕ ನಾಯಕರು ಸ್ವಾಗತಿಸಿದ್ದಾರೆ.

ಬ್ಯಾರಕ್ ಒಮಾಮಾ ಅಮೆರಿಕದ ರಾಜಕಾರಣದ ಹೊಸ ನಾಯಕರಷ್ಟೇ ಅಲ್ಲ, ವ್ಯಕ್ತಿಯೊಬ್ಬ ಪ್ರಾಮಾಣಿಕತೆ ಮತ್ತು ಪರಿಶ್ರಮಗಳಿಂದ ಸಾಧಿಸಬಹುದಾದ ಸಿದ್ಧಿಯ ಅಮೂಲ್ಯ ದ್ಯೋತಕವೂ ಆಗಿದ್ದಾರೆ; ಇತ್ತೀಚಿನ ದಿನಗಳ ಹತಾಶೆಯ ಕಾರ್ಮೋಡದ ನಡುವೆ, ಇಣುಕುತ್ತಿರುವ ಸೂರ್ಯನ ಹಾಗೆ ಅವರು ಕಾಣಬರುತ್ತಾರೆ, ಹೀಗೆ ಸಮಸ್ತ ಯುವಜನಾಂಗಕ್ಕೆ ಅವರು ಒಬ್ಬ ಆದರ್ಶವ್ಯಕ್ತಿಯಾಗಿದ್ದಾರೆ.